# ಕುಶಲ ಶ್ರಮಿಕ, ದಕ್ಷ ಉತ್ಪಾದನೆಯಿಂದ ಜವಳಿ ಏಳಿಗೆ

Janathavani 04-06-2022

## ಬಿ.ಐ.ಇ.ಟಿ.ಯ ಟೆಕ್ಸ್‌ಕ್ರಿಯೇಟಿವ್ - 22 ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ. ಸೆಲ್ವದಾಸ್

ದಾವಣಗೆರೆ, ಮೇ 3 - ಜವಳಿ ವಲಯದಲ್ಲಿ ದೇಶ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಎದುರಿಸುತ್ತಿದೆ. ಬಾಂಗ್ಲಾದೇಶದಂತಹ ದೇಶಗಳು ಕಡಿಮೆ ಕೂಲಿ ಹಾಗೂ ಉತ್ತಮ ತಂತ್ರಜ್ಞಾನ ಅಳವಡಿಕೆಯಿಂದ ಮುಂಚೂಣಿಗೆ ಬರುತ್ತಿವೆ. ಈ ಸಂದರ್ಭದಲ್ಲಿ ಭಾರತದ ಜವಳಿ ವಲಯ ಸಹ ಸ್ಪರ್ಧೆಗೆ ಸನ್ನದ್ಧವಾಗಬೇಕಿದೆ ಎಂದು ಬೆಂಗಳೂರಿನ ಜಿ.ಸಿ. ವಿಶ್ವವಿದ್ಯಾನಿಲಯದ ಸಹಾಯಕ ಉಪನ್ಯಾಸಕ ಡಾ. ಸೆಲ್ವದಾಸ್ ಹೇಳಿದ್ದಾರೆ.



ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಜವಳಿ ವಿಭಾಗದ ವತಿಯಿಂದ ಇಂದು ಬೆಳಿಗ್ಗೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ 'ಟೆಕ್ಸ್‌ಕ್ರಿಯೇಟಿವ್ - 22' ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕಡಿಮೆ ವೆಚ್ಚದಲ್ಲಿ ಬಟ್ಟೆಗಳನ್ನು ಉತ್ಪಾದಿಸಲು ಜಾಗತಿಕ ಕಂಪನಿಗಳು ನಿರಂತರ ಹುಡುಕಾಟದಲ್ಲಿರುತ್ತವೆ. ವಿಯಟ್ನಾಂ, ಬಾಂಗ್ಲಾದೇಶ ಮುಂತಾದ ದೇಶಗಳ ಕಡೆ ಗಮನ ಹೆಚ್ಚಾಗಿದೆ. ಬಾಂಗ್ಲಾದೇಶದಲ್ಲಿ ಕೂಲಿ ಕಡಿಮೆಯಾಗಿರುವ ಜೊತೆಗೆ ಕಚ್ಚಾ ವಸ್ತುಗಳ ಲಭ್ಯತೆ ಇದೆ. ಇತ್ತೀಚಿನ ದಿನಗಳಲ್ಲಿ ಕುಶಲ ಕಾರ್ಮಿಕರು ಲಭ್ಯವಾಗಿ, ಉತ್ಪಾದನಾ ತಂತ್ರಜ್ಞಾನದಲ್ಲೂ ಸುಧಾರಣೆಯಾಗಿದೆ ಎಂದವರು ಹೇಳಿದರು.

ದೇಶದ ಜವಳಿ ಉದ್ಯಮಗಳು ಈಗಾಗಲೇ ತಾಂತ್ರಿಕ ವಿಷಯದಲ್ಲಿ ಸುಧಾರಣೆ ಕಂಡಿವೆ. ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಉತ್ಪಾದಿಸುವಲ್ಲಿ ಮುನ್ನಡೆದಿವೆ. ಇದರ ಜೊತೆಗೆ ಕುಶಲ ಕಾರ್ಮಿಕ ಶಕ್ತಿಯನ್ನು ಹೊಂದಬೇಕಿದೆ. ಆಗ ಮಾತ್ರ ಜಾಗತಿಕ ಸ್ಪರ್ಧೆಗೆ ಬಲ ಬರುತ್ತದೆ ಎಂದವರು ತಿಳಿಸಿದರು.

ಕೊರೊನಾ ಸಮಯದಲ್ಲಿ ಕಾರ್ಮಿಕರು ವಲಸೆ ಹೋದ ಕಾರಣ ಸಾಕಷ್ಟು ಸಮಸ್ಯೆ ಉಂಟಾಗಿತ್ತು. ನಂತರದ ದಿನಗಳಲ್ಲಿ ಉದ್ಯಮ ಚೇತರಿಸಿಕೊಂಡು ಅಗತ್ಯ ತಂತ್ರಜ್ಞಾನಗಳ ಅಳವಡಿಕೆಯೊಂದಿಗೆ ಮುನ್ನಡೆದಿದೆ. ಈ ನಡುವೆಯೇ, ಕಚ್ಚಾ ವಸ್ತುಗಳ ಬೆಲೆ ಏರಿಕೆ ಸಮಸ್ಯೆ ಎದುರಾಗಿದೆ. ಲೀನಿಯರ್ ಮಷೀನ್ ಸಿಸ್ಟಂ ಮೂಲಕ ಉತ್ಪಾದನೆ ವೇಳೆ ಆಗುವ ಪೋಲು ಕಡಿಮೆ ಮಾಡುವ ಅಗತ್ಯವಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಜವಳಿ ಉದ್ಯಮದಲ್ಲಿ ಬ್ರ್ಯಾಂಡಿಂಗ್ ಬಹಳ (4ನೇ ಪುಟಕ್ಕೆ)

# ಕುಶಲ ಶ್ರಮಿಕ, ದಕ್ಷ ಉತ್ಪಾದನೆಯಿಂದ ಜವಳಿ ಏಳಿಗೆ

**(1ನೇ ಪುಟದಿಂದ)** ಮುಖ್ಯವಾಗಿದೆ. ಬ್ರ್ಯಾಂಡಿಂಗ್ ಇಲ್ಲದಿದ್ದರೆ ಮಾರುಕಟ್ಟೆಯಲ್ಲಿ ಬೆಳವಣಿಗೆ ಸೀಮಿತವಾಗಿರುತ್ತದೆ. ಭಾರತದ ಕನಿಷ್ಠ ಮೂರ್ನಾಲ್ಕು ಬ್ರ್ಯಾಂಡ್‌ಗಳಾದರೂ ಜಾಗತಿಕವಾಗಿ ಹೆಸರು ಗಳಿಸಬೇಕಿದೆ ಎಂದವರು ಅಭಿಪ್ರಾಯ ಪಟ್ಟರು.

ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಮಾತನಾಡಿ, ದಾವಣಗೆರೆ ಒಂದು ಕಾಲದಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಹೆಸರಾಗಿತ್ತು.ಬದಲಾದತಂತ್ರಜ್ಞಾನಅಳವಡಿಸಿಕೊಳ್ಳದೇ ಆ ಹೆಸರು ಮರೆಯಾಯಿತು. ಮತ್ತೆ ಸರಿಯಾದ ತಂತ್ರಜ್ಞಾನದ ಮೂಲಕ ಜವಳಿ ವಲಯಕ್ಕೆ ಉತ್ತೇಜನ ನೀಡಲು ಅವಕಾಶವಿದೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಕಾಲೇಜಿನ ಜವಳಿ ವಿಭಾಗದ ಮುಖ್ಯಸ್ಥ ಡಾ. ವೈ.ಎನ್. ದಿನೇಶ್ ಉಪಸ್ಥಿತರಿದ್ದರು.

## ಬಟ್ಟೆಯಿಂದ ಬಂಗಾರದ ರಾಶಿ ಪಡೆಯುತ್ತಿದ್ದ ಭಾರತ!

13ರಿಂದ 16ನೇ ಶತಮಾನದಲ್ಲಿ ಆರ್ಥಿಕತೆಯಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿತ್ತು. ಇದಕ್ಕೆ ಜವಳಿ ವಲಯದಲ್ಲಿ ಭಾರತ ಹೊಂದಿದ್ದ ಪರಿಣಿತಿಯೇ ಪ್ರಮುಖ ಕಾರಣ ಎಂದು ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ತಿಳಿಸಿದ್ದಾರೆ.

ಮಸ್ಲಿನ್, ರೇಷ್ಮೆ ಹಾಗೂ ಸೆಣಬಿನ ಉತ್ಪನ್ನಗಳಿಗೆ ವಿದೇಶಗಳಲ್ಲಿ ಭಾರೀ ಬೇಡಿಕೆ ಇತ್ತು.

ಆಗ ನಾಣ್ಯಗಳು ಬಂಗಾರ ಹಾಗೂ ಬೆಳ್ಳಿ ಸ್ವರೂಪದಲ್ಲಿದ್ದವು. ಹೀಗಾಗಿ ಬಟ್ಟೆಗಳನ್ನು ರಫ್ತು ಮಾಡುತ್ತಿದ್ದ ಭಾರತ ಅಪಾರ ಪ್ರಮಾಣದ ಬಂಗಾರ ಹಾಗೂ ಬೆಳ್ಳಿ ನಾಣ್ಯಗಳನ್ನು ಪಡೆಯುತ್ತಿತ್ತು ಎಂದವರು ಹೇಳಿದರು.

ಈ ರೀತಿ ಬಂಗಾರ - ಬೆಳ್ಳಿಯಲ್ಲಿ ಸಮೃದ್ಧವಾಗಿದ್ದ ಕಾರಣದಿಂದಲೇ ಭಾರತ ವಿದೇಶಿ ಆಕ್ರಮಣಕಾರರನ್ನು ಸೆಳೆಯುತ್ತಿತ್ತು.

ಈಸ್ಟ್ ಇಂಡಿಯಾ ಕಂಪನಿ ತನ್ನ ಸಿದ್ಧ ಉತ್ಪನ್ನಗಳನ್ನು ಭಾರತದಲ್ಲಿ ಮಾರಬೇಕೆಂಬ ಕಾರಣಕ್ಕೆ ಸ್ಥಳೀಯವಾಗಿ ಬಲಿಷ್ಠವಾಗಿದ್ದ ಜವಳಿ ಉದ್ಯಮವನ್ನು ಹಾಳುಗೆಡವಿತು ಎಂದವರು ವಿಷಾದಿಸಿದರು.